ANUBHAVS



# ಬಾಪ್ರೂವಿನ ಚರಣದಲ್ಲಿ ಏಕನಿಷ್ಠ ಬಾವ ಇರಲಿ

© Copyright 2010, Manasamarthyadata.com

-ಕೆ.ಎಸ್.ರಾಮಾನಥನ್. ಕಲೀನಾ

ನಾನು ಕಳೆದ ಮೂರುವರೆ ವರ್ಷದಿಂದ ಬಾಪೂರವರ ಭಕ್ತಿಯನ್ನು ಮಾಡುತ್ತಿದ್ದೆ. ನನ್ನ ನೆರೆಮನೆಯವರಾದ ಶ್ರೀ ಶ್ರೀಧರ್ ಸರ್‌ದೇಸಾಯಿಯವರು ನನಗೆ ಬಾಪೂರವರ ಬಗ್ಗೆ ಮಾಹಿತಿ ತಿಳಿಸಿದ್ದರು. ನಾನು ನನ್ನ ಅನುಭವವನ್ನು ನಿಮಗೆಲ್ಲರಿಗೆ ಹೇಳುವೆ.

ನನ್ನ ಎರಡನೇ ಮಗಳು ಕವಿತಾ ಡಾಕ್ಟರ್. ಅವಳು ಮದುವೆಗೆ ತಯಾರಾಗಿದ್ದಳು. ನಾವು ಅವಳಿಗಾಗಿ ಸರಿಯಾದ ವರನನ್ನು ಹುಡುಕುತ್ತಿದ್ದೆವು. ಅವಳಿಗೂ ಕೂಡಾ ಹುಡುಗ ಡಾಕ್ಟರ್ ಆಗಿರಬೇಕು ಎಂಬ ಇಚ್ಚೆಯಿತ್ತು. ಜಾತಿ-ಗೀತಿ ಅವಳು ಏನೂ ನೋಡುತ್ತಿರಲಿಲ್ಲ. ಅವಳು ಜಾತಕ ಕುಂಡಲಿಯಲ್ಲಿಯೂ ಕೂಡಾ ವಿಶ್ವಾಸ ವಿಡುತ್ತಿರಲಿಲ್ಲ. ನಾವು ದಿನಪತ್ರಿಕೆಯಲ್ಲಿ ಜಾಹೀರಾತು ಕೊಟ್ಟೆವು. ಜನರಿಂದ ಕಾಗದ ಬರಲು ಶುರುವಾಯಿತು. ಅವುಗಳಿಂದ ನಾವು 5-6 ಹುಡುಗರನ್ನು ಆರಿಸಿದೆವು. ಕವಿತಾ ಮದುವೆಯ ನಂತರ  ಶಿಕ್ಷಣ ಮುಂದುವರಿಸುವಳೆಂದು ನಾವು 2-3ಹುಡುಗರ ಹತ್ತಿರ ಮಾತನಾಡಿದ್ದೆವು. ಅದರಲ್ಲಿ ಒಬ್ಬ ಹುಡುಗನು ಮುಂಬಯಿಯಲ್ಲಿ ಓದುತ್ತಿದ್ದ. ಅವನಿಗೆ ಕವಿತಾಳು ತುಂಬಾ ಮೆಚ್ಚುಗೆ ಆದಳು. ಮೊದಲನೆಯ ಭೇಟಿಯಲ್ಲಿಯೇ ಅವನು ಮತ್ತೊಂದು ಸಲ ಭೇಟಿಯಾಗುವ ಅವನ ಇಚ್ಚೆಯನ್ನು ಹೇಳಿದ. ಅವನು ಮಹಾರಾಷ್ಟ್ರದವನು. ಕುಟುಂಬದವರು ನಾಗಪುರದಲ್ಲಿ ಇದ್ದಿದ್ದರು. ಅವನ ಸಂಬಂಧದಲ್ಲಿ ಎಲ್ಲರೂ ಡಾಕ್ಟರ್ ಆಗಿದ್ದರು. ಕೇವಲ ಅವನ ತಾಯಿ ವಕೀಲ್ ಆಗಿದ್ದರು. ಅವನ ಪರಿವಾರದಲ್ಲಿ ಎಲ್ಲರೂ ಸುಸಂಸ್ಕೃತರು ಹಾಗೂ ಒಳ್ಳೆಯ ಹೃದಯವಂತರಾಗಿದ್ದರು. ವಿಶೇಷವೆಂದರೆ, ಆ ಪರಿವಾರದಲ್ಲಿ ಹೆಚ್ಚಿನ ಅಂತರ್‌ಜಾತಿಯ ವಿವಾಹವು ಕೂಡಾ ಹಾಗಿದ್ದವು. ಅವರೆಲ್ಲರೂ ಆನಂದದಿಂದ ಜೀವನ ನಡೆಸುತ್ತಿದ್ದಾರೆ. ಅವರಿಗೂ ಕೂಡಾ ನಮ್ಮ ಪರಿವಾರ ಮೆಚ್ಚುಗೆಯಾಯಿತು. ಕವಿತಾಳ ಫೋಟೋ ನೋಡಿದಾಗ ಅವರು ಅವಳನ್ನು ಭೇಟಿಯಾಗಲು ಹೇಳಿದರು. ಕವಿತಾ ಕೂಡಾ ಅವರನ್ನು ಸಿಗಲು ಇಚ್ಚಿಸಿದಳು. ನಮ್ಮ ಪರಿವಾರದಲ್ಲಿ ಒಂದು ಮದುವೆಯ ಪರಿಣಾಮ ಸರಿಯಾಗದ ಕಾರಣದಿಂದಾಗಿ ನಾನು ಈ ಸಂಬಂಧದ ಬಗ್ಗೆ ಸರಿಯಾದ ನಿರ್ಣಯ ತೆಗೆದುಕೊಳ್ಳಲಾರದಾದೆನು. ಹುಡುಗನ ತಂದೆ - ತಾಯಿ ಪದೇ ಪದೇ ನಾಗಪುರದಿಂದ ಫೋನ್



ಮಾಡಿ ನಮ್ಮನ್ನು ಬರಲು ಹೇಳುತ್ತಿದ್ದರು. ಆದರೆ, ಶಂಕಾಸ್ಪದವಾದ ನನ್ನ ಮನಸ್ಸು ಇದನ್ನು ಬಿಡುತ್ತಿರಲಿಲ್ಲ. ಆದ್ದರಿಂದ ನಾನು ಈ ವಿಷಯದಲ್ಲಿ ಹೆಚ್ಚಿಗೆ ಆಸಕ್ತಿ ತೋರಿಸುತ್ತಿರಲಿಲ್ಲ. ಅವರು ಕೆಲವು ಸಲ ನಮ್ಮನ್ನು ನಾಗಪುರಕ್ಕೆ ಬರಲು ಹೇಳಿದರು. ನನ್ನ ತಲೆಯಲ್ಲಿ ಈಗ ವಿಚಾರ ಬಂತು. ಏನೆಂದರೆ ಹುಡುಗ ಕೈ ತಪ್ಪಿ ಹೋದರೆ?

ಒಂದು ದಿನ ಬೆಳಿಗ್ಗೆ ನಾನು ಪೂಜೆ ಮಾಡುವ ಸಮಯದಲ್ಲಿ ಕ್ಲೇಶನಿವಾರಕ ಸ್ತೋತ್ರ ಓದುತ್ತಿರುವಾಗ ನನಗೆ ಸ್ಪಷ್ಟ ಸ್ವರದಲ್ಲಿ ಕೇಳಿಸಿತು. ‘‘ಅರೇ ಮೂರ್ಖ ನಾಗುಪುರಕ್ಕೆ ಹೋಗು ಎಲ್ಲಾ ಸರಿಯಾಗುತ್ತೆ’’ ಎಂದು. ನನಗೆ 3 ದಿನ ಕೂಡಾ ಇದೇ ರೀತಿಯ ಆದೇಶ ಸ್ಪಷ್ಟವಾಗಿ ಕೇಳಿಸುತ್ತಿತ್ತು. ನನ್ನನ್ನು ಭ್ರಮೆಯಿಂದ ಎಬ್ಬಿಸುತ್ತಿದ್ದರು ಎಂದು ಅನಿಸುತ್ತಿತ್ತು.

ನಾನು ನನ್ನ ಪತ್ನಿ ಮತ್ತು ಮಗಳು ಕವಿತಾ ಜೊತೆ ನಾಗಪುರಕ್ಕೆ ತಲುಪಿದೆವು. ಹುಡುಗನ ತಂದೆ-ತಾಯಿ ಕವಿತಾಳ ಜತೆ ತುಂಬಾ ಸಮಯದವರೆಗೆ ಮಾತನಾಡಿದರು. ನಾವು ಕೂಡಾ ಅವರೊಂದಿಗೆ ಕೆಲವೆಲ್ಲ ವಿಷಯಗಳನ್ನು ಕೇಳಿದೆವು. ಎರಡೂ ಪಕ್ಷದವರು ಒಬ್ಬರಿನ್ನೊಬ್ಬರೊಂದಿಗೆ ಸಹಮತವಾದೆವು. ನನ್ನ ಮನಸ್ಸಿನ ಹೆದರಿಕೆ ಹೋಗಿ ಸಂತೋಷದ ಕ್ಷಣಗಳು ಉದ್ಭವಿಸಿದ್ದವು. ಪ.ಪೂ.ಬಾಪೂರವರ ಆಶ್ವಾಸನೆ ವಾಣಿಯ ಕಾರಣದಿಂದ ನಾನು ಹೆದರದೇ ನಿರ್ಣಯ ತೆಗೆದುಕೊಂಡೆ. ‘‘ಇವನೇ ನನ್ನ ಮಗಳಿಗೆ ಸರಿಯಾದ ವರ’’

ಮೇ 1, 2004 ರಂದು ನನ್ನ ಮಗಳ ವಿವಾಹವು ಆ ಹುಡುಗನ ಜತೆ ಆಯಿತು. ಇಬ್ಬರೂ ಆನಂದದಿಂದ ಜೀವನ ಸಾಗಿಸುತ್ತಿದ್ದಾರೆ. ಎಲ್ಲರೂ ನೆಂಟಸ್ತಿಕೆ ಆಗಬಹುದು ಎಂದರೂ ಕೂಡಾ ನಾನು ಮಾತ್ರ ನಿರ್ಣಯ ತೆಗೆದು ಕೊಳ್ಳಲಾಗದೆ ನನ್ನ ಮನಸ್ಸನ್ನು ಯಾರು ಶಾಂತಗೊಳಿಸಿದರು? ನನ್ನನ್ನು ನಾಗಪುರಕ್ಕೆ ಕಳಿಸಲು ಯಾರ ಕೈ ಇತ್ತು? ಈ ಕಾರ್ಯವೆಲ್ಲಾ ನನ್ನ ಪ್ರೀತಿಯ ಬಾಪೂರವರ ಹೊರತು ಬೇರೆ ಯಾರೂ ಮಾಡಲು ಸಾಧ್ಯವಿಲ್ಲ. ಚಂಚಲ ತಿರುಗಾಡುವ ಮನಸ್ಸನ್ನು ಶಾಂತಮಾಡಿ ಸರಿಯಾದ ನಿರ್ಣಯವನ್ನು ಮಾಡಿ ತೋರಿಸುವವ ಬಾಪೂರವರ ಹೊರತು ಬೇರೆ ಯಾರೂ ಇಲ್ಲ. ‘‘ನಾನು ಪರಮ ಪೂಜ್ಯ ಬಾಪೂರವರಿಗೆ ಸದಾ ಋಣಿಯಾಗಿದ್ದೇನೆ’’

  

**ಬಾಪೂರವರ ಚರಣದಲ್ಲಿ**

**ದೃಢ ಭಾವ ಇಡಿ**

**ಬೇರೆ ಎಲ್ಲಿ ಹೋಗುವುದರ ಅಗತ್ಯವಿಲ್ಲ**

( ಬಾಪೂರವರ ಚರಣದಲ್ಲಿ ಏಕನಿಷ್ಠೆ ಭಾವವಿದ್ದರೆ ಬೇರೆ ಎಲ್ಲಿ ತಿರುಗಾಡುವ ಅಗತ್ಯವಿಲ್ಲ)

ANUBHAVS

# HARI OM

© Copyright 2010, Manasamarthyadata.com

manasamarthyadata.com